ಅಸಲು ದಾವಾ ಸಂಖ್ಯೆ . 247/2014

ಪಿ.ಡಬ್ಲ್ಯೂ-02
ದಿಃ 21-12-2021
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎನ್ ಎಸ್ ಎಂ ವಕೀಲರಿಂದ ಃ-

ನಾನು ಎಸ್ಎಸ್ಎಲ್ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಚಿಕ್ಕ ವಯಸ್ಸಿನಿಂದ ಬೇಸಾಯ ಮಾಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿನ ವಿಚಾರಗಳು ಗೊತ್ತಿರುವುದಿಲ್ಲ ಎಂದರೆ ಸರಿ . ಸರ್ವೆ ನಂ 23 ಮೂಲತಃ 1 ಎಕರೆ 29 ಗುಂಟೆ ಬರುತ್ತದೆ. ಮೂಲತಃ ಸದರಿ ಆಸ್ತಿಯಲ್ಲಿ ಕರಿಬಸಪ್ಪ ಮತ್ತು ಕುಂಟುಬಸಪ್ಪ ಅಪ್ಪ ಮಗ ಇಬ್ಬರು ಒಡೆಯುತ್ತಿದ್ದರು . ಕುಂಟುಬಸಪ್ಪರವರಿಗೆ ಇಬ್ಬರು ಮಕ್ಕಳು . ಕರಿಬಸಪ್ಪ ಮತ್ತು ಸಿದ್ದಪ್ಪ .

ದಾವಾ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮೂಲತಃ ಸರ್ವೆ ನಂ 23 ಕುಂದೂರಪ್ಪ ಬಿನ್ ಕರಿಬಸಪ್ಪ ರವರಿಗೆ ಸೇರಿರುತ್ತದೆ ಎಂದರೆ ಸರಿ. ಸರ್ವೆ ನಂ 23 ಈಗ ಹಲವಾರು ಪೋಡಾಗಿರುತ್ತದೆ ಎಂದರೆ ಸರಿ . ಸರ್ವೆ ನಂ 23 /2 9 ಎಕರೆ 20 ಗುಂಟೆ ಎಂದರೆ ಸರಿ . ಕುಂದೂರಪ್ಪ ಬಿನ್ ಹನುಮಂತಪ್ಪ ರವರಿಗೆ ಇಬ್ಬರು ಮಕ್ಕಳು. ಯಲ್ಲಪ್ಪ ಮತ್ತು ಗೋಣೆಪ್ಪ ಎಂದರೆ ನನಗೆ ಗೊತ್ತಿಲ್ಲ. ಯಲ್ಲಪ್ಪರವರಿಗೆ ದಾಸಪ್ಪ ಯಾನೆ ದಾಸಣ್ಣ , ಫಕೀರಪ್ಪ , ಬಸಪ್ಪ , ಬಿಷ್ಟಪ್ಪ ಎಂದರೆ ನನಗೆ ಗೊತ್ತಿಲ್ಲ.

ಯಲ್ಲಪ್ಪ ಮತ್ತು ಗೋಣೆಪ್ಪ ರವರುಗಳು ಅವರ ಜೀವನದ ಕಾಲದಲ್ಲಿ ಪಿತ್ರಾರ್ಜಿತ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುತ್ತಾರೆಂದರೆ ಗೊತ್ತಿರುವುದಿಲ್ಲ. ಅದರಂತೆ ಯಲ್ಲಪ್ಪ ರವರಗೆ ಸರ್ವೆ ನಂ 23 ರಲ್ಲಿ 9 ಎಕರೆ 21 ಗುಂಟೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮತ್ತು ಗೋಣೆಪ್ಪರವರಿಗೆ ಸರ್ವೆ ನಂ 68/1 ಮತ್ತು ಸರ್ವೆ ನಂ 22 ರಲ್ಲಿ ಆಸ್ತಿಗಳು ಬಂದಿರುತ್ತದೆ ಎಂಬ ಸೂಚನೆ ಗೆ ಇಲ್ಲ ಎಂದರು .

ಗೋಣೆಪ್ಪರವರಿಗೆ , ಮೂಕಪ್ಪ , ಮಲ್ಲಪ್ಪ , ಪರಶುರಾಮಪ್ಪ , ಹನುಮತಂಪ್ಪ ಮತ್ತು ಗೌರಮ್ಮ ಎಂಬ ಹೆಣ್ಣು ಮಗಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಗೌರಮ್ಮ ಮತ್ತು ಕುಂಟುಬಸಪ್ಪ ದಂಪತಿಗಳಿಗೆ ಸಿದ್ದಪ್ಪ ಮತ್ತು ಕರಿಬಸಪ್ಪ ಮಕ್ಕಳು ಎಂದರೆ ಸರಿ . ಕರಿಬಸಪ್ಪ ವಾದಿ

ಎಂದರೆ ಸರಿ .  ವಾದಿ ಘೋಷಣಾತ್ಮಕ  ದಾವಾ  ಹೂಡಿರುತ್ತಾರೆಂದರೆ ಸರಿ . ಸದರಿ ದಾವೆಯಲ್ಲಿ ಸಿದ್ದಪ್ಪರವರನ್ನು ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ , ಕರಿಬಸಪ್ಪರವರೇ ಮಾಡುತ್ತಿದ್ದಾರೆ ಎಂದರು .  ಕರಿಬಸಪ್ಪ ರವರಿಗೆ ದಾವಾ ಆಸ್ತಿ ಹೇಗೆ ಬಂದಿರುತ್ತದೆ ಎಂದು ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.